ಬಾ.ರಂ. ಸುರೇಶ್, ಶಿವಮೊಗ್ಗ

*ನನ್ನವಳು ದಿನ ಬೆಳಗಾದರೆ ಜಗಳ ಪ್ರಾರಂಭ ಮಾಡುತ್ತಾಳೆ, ರಾತ್ರಿ ಸುಮ್ಮನಾಗುತ್ತಾಳೆ. ಫಲಿತಾಂಶವೇನಾಗಬಹುದು ಶಿವಾ?*



ಅಕ್ಕಪಕ್ಕದ ಮನೆಯವರು ರಾತ್ರಿ ಸುಖವಾಗಿ ನಿದ್ರಿಸಿ ಬೆಳಗ್ಗೆಯೇ ಬರುವ ನೀರನ್ನು ಹಿಡಿಯಲು ಅನುಕೂಲವಾಗುತ್ತದೆ!

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ

*ಸಂಪ್ರದಾಯವಾದಿಗಳು ಅಂದರೆ ಯಾರು?*

ಆಚರಣೆಗಳನ್ನು ಯಾರು, ಎಂದು, ಎಲ್ಲಿ, ಹೇಗೆ ಮಾಡಬೇಕೆಂದು ತಿಳಿದಿದ್ದು, ಏಕೆ ಮಾಡಬೇಕೆಂದು ತಿಳಿಯದವರು!

ವಿನಯ್ ಸುರೇಶ್, ಅರಕೆರೆ

*ಪ್ರತ್ಯೇಕವಾಗಿ ಯಮನನ್ನು ಕಾಣಬೇಕು ಅಂದ್ರೆ ಏನು ಮಾಡಬೇಕು?*

ನರ್ಸಿಂಗ್‌ಹೋಂಗೆ ಫೋನ್ ಮಾಡಿ ಅಪಾಯಿಂಟ್‌ಮೆಂಟ್ ಫಿಕ್ಸ್ ಮಾಡಿಕೊಳ್ಳಬೇಕು.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ

*ಸರ್ವಾಂಗಸುಂದರಿ ಎಂದರೆ ಹೇಗಿರುತ್ತಾಳೆ?*

ಕಣ್ಣಿಗೆ ತಂಪು, ಮನಕ್ಕೆ ಮುದ ನೀಡುವ ಬೆಳದಿಂಗಳಿನಂತೆ!

ಸಂಜನಾ ಆರ್, ಶಿವಮೊಗ್ಗ

*ಹುಡುಗಿಯರು ಎಷ್ಟು ಬಾರಿ ಓದಿದ್ದರೂ ಪರೀಕ್ಷೆಯ ಹಿಂದಿನ ದಿನ ಏನೂ ಓದಿಲ್ಲ ಅಂತಾರೆ. ಯಾಕೆ?*



ಓದಿದ್ದೇನೆ ಎಂದರೆ ಹೇಳಿಕೊಡಿ ಎಂದು ಹುಡುಗರ ಪಟಾಲಂ ಹಿಂದೆ ಬೀಳುತ್ತದಲ್ಲ!

ಮೋಹನರಾಜು ಎಸ್.ಎ. ಶಿವಮೊಗ್ಗ

*ಚುನಾವಣಾ ಬಿಸಿಗೂ, ಬೆಲೆ ಏರಿಕೆ ಬಿಸಿಗೂ ವ್ಯತ್ಯಾಸವೇನು?*

ಚುನಾವಣಾ ಬಿಸಿ ಮೂರು ದಿನಕ್ಕೆ ತಗ್ಗುವ ವೈರಲ್ ಫೀವರ್; ಬೆಲೆ ಏರಿಕೆ ಬಿಸಿ ಕಡೆಯವರೆಗೂ ಕಾಡುವ ಕ್ಯಾನ್ಸರ್!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

*ದೇವೇಗೌಡರು ಇದು ನನ್ನ ಕಡೆಯ ಚುನಾವಣೆ ಎನ್ನುವುದಕ್ಕೆ ಇರುವ ಅರ್ಥವೇನು?*

'ನನ್ನ ಕಡೆಯ' ಎಂದರೆ ನನ್ನ ಜನರಿಂದ, ನನ್ನ ಜನರಿಗಾಗಿ, ನನ್ನ ಜನರಿಗೋಸ್ಕರ ನಡೆವ ಚುನಾವಣೆ ಎಂದರ್ಥ; ಲಾಸ್ಟ್ ಎಂದಲ್ಲ!

ಬಿ.ಎಂ. ಪರಶಿವಮೂರ್ತಿ, ಬೆಂಗಳೂರು

*ಕುಡುಕನಿಗೂ, ಸಿಡುಕನಿಗೂ ವ್ಯತ್ಯಾಸವೇನು ಸಾರ್?*

ಕುಡುಕನಿಗೆ ಗಂಟು ಕರಗುತ್ತದೆ; ಸಿಡುಕನಿಗೆ ಗಂಟು ಸೇರುತ್ತದೆ– ಹುಬ್ಬಿನಲ್ಲಿ!

ರಾ. ಕೃಷ್ಣಪ್ಪ, ತಲದುಮ್ಮನಹಳ್ಳಿ

*ಲೋಕೋದ್ಧಾರಕ್ಕಾಗಿ ಮಾಡಿದ ಯಜ್ಞ, ಯಾಗಗಳ ಫಲವೇನಾಯಿತು?*

ಶ್ಲೋಕೋದ್ಧಾರ ಮಾಡಿದವರಿಗಂತೂ ಫಲ ನೀಡಿತಂತೆ!

ಮಾಧವ ಶ್ಯಾನಭಾಗ, ಕುಂದಾಪುರ

*ಮದುವೆಗೆ ಮುನ್ನ ರಾಗಿಣಿ, ನಂತರ ಗೃಹಿಣಿ, ಮಕ್ಕಳಾಗುವವರೆಗೆ ಅರಗಿಣಿಯಾಗಿರುವ ಮಹಿಳೆ ನಂತರ ಸಿಂಹಿಣಿಯಾಗುವುದೇಕೆ?*

ಮದುವೆಗೆ ಮುನ್ನ ಸಭ್ಯಸ್ತ, ಮದುವೆಯ ನಂತರ ಗೃಹಸ್ಥ, ಮಕ್ಕಳಾಗುವವರೆಗೆ ಬಾಧ್ಯಸ್ತನಾದವನು ನಂತರ ತಟಸ್ಥನಾಗುವುದರಿಂದ!

ಎಸ್.ಎನ್.ಮಹಾಬಲರಾವ್, ಎನ್‌ಆರ್‌ಪುರ

*ಎಂಗೇಜ್‌ಮೆಂಟ್ ಆದರೂ ಹುಡುಗಿಗೆ ಮೊಬೈಲ್ ಬಳಸಲು ಪಾಲಕರು ಬಿಡುತ್ತಿಲ್ಲವಲ್ಲಾ...?*

ಹುಡುಗನೇ ಹೊಸ ಮೊಬೈಲ್ ಕೊಡಿಸಿ ಕರೆನ್ಸಿ ಹಾಕಿಸಲೆಂಬುದು ಆ ಜಿಪುಣ ಪಾಲಕರ ಉಪಾಯವಂತೆ!

ಆರ್. ಮಧುಸೂದನ್, ಹಾಸನ

*ಮಹಾಭಾರತದ ಕಾಲದಲ್ಲಿ ಸ್ತ್ರೀ ಸಂಘಟನೆಗಳು ಇದ್ದಿದ್ದರೆ ದ್ರೌಪದಿ ವಸ್ತ್ರಾಪಹರಣವನ್ನು ಹೇಗೆ ಪ್ರತಿಭಟಿಸುತ್ತಿದ್ದರು?*

ಹಿಡಿಂಬೆಯ ಮುಂದಾಳತ್ವದಲ್ಲಿ, ಘನಘೋರವಾಗಿ!

ಮೊಳಕಾಲ್ಮೂರು ಸುರೇಶ, ಬಳ್ಳಾರಿ

*ಅಲ್ರಪ್ಪಾ! ಎಳ್ಳು ಬೆಲ್ಲ, ಬೇವು ಬೆಲ್ಲ, ಜೀರಿಗೆ ಬೆಲ್ಲ ಇವುಗಳಿಗಿರುವ ಸಂಬಂಧ ಹೇಳ್ರೀ...?*

ಹುಗ್ಗಿಗೆ ಎಳ್ಳು ಬೆಲ್ಲ, ಸುಗ್ಗಿಗೆ ಬೇವು ಬೆಲ್ಲ, ಹಿಗ್ಗಿಗೆ ಜೀರಿಗೆ ಬೆಲ್ಲ!

## ಬಹುಮಾನಿತ ಪ್ರಶ್ನೆ

ಎ. ವಾಸುದೇವರಾವ್, ಕನ್ನರ್ಪಾಡಿ

*ವೈದ್ಯರಿಗೆ ಬಿಳಿಯ ಕೋಟು, ವಕೀಲರಿಗೆ ಕರಿಯ ಕೋಟು. ಇದು ಏಕೆ ಹೀಗೆ ಸರ್?*

ಚಿರಶಾಂತಿ ಹೊಂದುವವರೊಡನೆ ಇರುವವರಿಗೆ ಶಾಂತಿಯ ಸಂಕೇತ; ಕಾದಾಡುವವರ ಸಹವಾಸವಿರುವವರಿಗೆ ಕಪ್ಪುಬಾವುಟದ ಸಂಕೇತ!

ಡೈರಿ ವಿಶ್ವನಾಥ್, ಬೆಂಗಳೂರು

*ಚರಣ ದಾಸಿಯರು ಇದ್ದಾರೆಯೆ?*

ಇದ್ದಾರೆ; ಬ್ಯೂಟಿ ಪಾರ್ಲರ್‌ಗಳಲ್ಲಿ; ಅವರನ್ನು ಪೆಡಿಕ್ಯೂರಿಸ್ಟ್ ಎಂದು ಕರೆಯುತ್ತಾರೆ!

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

*ದಿನಪತ್ರಿಕೆ ಮತ್ತು ಲಗ್ನಪತ್ರಿಕೆಗೆ ಏನು ವ್ಯತ್ಯಾಸ?*

ದಿನಪತ್ರಿಕೆ ವರ್ತಮಾನಕ್ಕೆ ಮುಖ್ಯ, ಲಗ್ನಪತ್ರಿಕೆ ಭವಿಷ್ಯಕ್ಕೆ ಮುಖ್ಯ!

ಕೆ. ಹೊನ್ನಪ್ಪ, ಕ್ಯಾತ್ಸಂದ್ರ

*ರಾಜಕಾರಣಿಗಳಿಗೆ ಸಾಮಾಜಿಕ ಜವಾಬ್ದಾರಿ ಬರುವುದು ಯಾವಾಗ?*

ವಿರೋಧ ಪಕ್ಷದಲ್ಲಿದ್ದಾಗ.

ಸುಮಿತ್ರಾ ಕೊತ್ವಾಲ್, ಉಡುಪಿ

*ತಮ್ಮಲ್ಲಿ ಕೊಳೆತುಹೋಗುವಷ್ಟು ಸಂಪತ್ತು ಇದ್ದರೂ ಇನ್ನೊಬ್ಬರ ಹಣಕ್ಕೆ ಬಾಯಿ ಬಿಡುವವರನ್ನು ಏನು ಮಾಡಬೇಕು ಸಾರ್?*



ಬ್ಯಾಂಕ್‌ನ ಡಿಪಾಸಿಟ್ ಮೊಬಿಲೈಸೇಷನ್ ಆಫೀಸರ್ ಮಾಡಿಬಿಡಿ!

ಹಾಡ್ಯ ಬಿ. ಜಯಾನಂದ, ಮೈಸೂರು

*ಕಾವಿ, ಖಾಕಿ, ಖಾದಿಧಾರಿಗಳನ್ನು ಯಾವ ಗ್ರಹಕ್ಕೆ ಹೋಲಿಸಬಹುದು?*

ಕಾವಿ ತಲೆ ಮಾತ್ರ ಇರಬೇಕಾದ ರಾಹು, ಖಾಕಿ ದೇಹ ಮಾತ್ರ ಇರಬೇಕಾದ ಕೇತು, ಖಾದಿ ಸಕಲಪೀಡಕ ಶನಿ!

ಎಂ.ಎನ್. ಸೋಮಶೇಖರ್, ಮೈಸೂರು

*ಶನಿದೇವರ ಮೈಬಣ್ಣವೇಕೆ ತೊಳೆದ ಕೆಂಡದಂತಿದೆ?*

ಸೂರ್ಯನ ಮಗನಲ್ಲವೇ; ಅಪ್ಪ ಎತ್ತಿಕೊಂಡಾಗ ಥರ್ಡ್ ಡಿಗ್ರಿ ಬರ್ನ್ಸ್ (son burn) ಆಗಿ ಹೀಗಾಗಿದ್ದಾನೆ!

■ ರಾಮ್